ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಸರ್ಕಾರ ತೀರ್ಮಾನವಾಗಿ ಪರಿಗಣಿಸುತ್ತದೆ. ಹಾಗೂ ಅದಕ್ಕೆ ಬೇಕಾದ ತಾಂತ್ರಿಕ ಮಾಹಿತಿಯನ್ನು ತರಿಸಿಕೊಂಡು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ಶ್ರೀಮಾನ್ ದೇವೇಗೌಡರು, ನಾವು ಯಾವ ಪ್ರಶ್ನೆಯನ್ನು ಕೇಳಿದರೂ, ಆಶ್ವಾಸನೆಗಳನ್ನು ಕೊಟ್ಟುಕೊಂಡೇ ಬಂದಿದ್ದಾರೆ. ಆಶ್ವಾಸನೆಗಳನ್ನು ಕೊಟ್ಟು ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆ ಎನ್ನುವುದನ್ನು ಹೇಳಬೇಕು. ಈಗ ಬಜೆಟ್ ಆಯಿತು. ಆಯವ್ಯಯ ವೈಜ್ಞಾನಿಕವಾಗಿ ಸುಮಾರು ನಾಲ್ಕೂವರೆ ತಿಂಗಳು ಆಯಿತು. ಇಷ್ಟಾದರೂ ಅನ್ಯುಯಲ್ ಪ್ಲಾನ್ ಅಪ್ರೂವಲ್ ಆಗಿಲ್ಲ. ಅದ್ದುದರಿಂದ ಬಜೆಟ್‌ಗೆ ಮಾನ್ಯತೆ ಇಲ್ಲ, ಇನ್ನು ನಿಮ್ಮ ಆಶ್ವಾಸನೆಗೆ ಎಷ್ಟು ಮಾನ್ಯತೆ ಇದೆ...?

ಶ್ರೀ ಹೆಚ್. ಡಿ. ದೇವೇಗೌಡ.— ನಮ್ಮ ಆಶ್ವಾಸನೆಗಳನ್ನು ಪರಿಶೀಲನೆ ಮಾಡುವುದಕ್ಕೆ ಸದನದ ಸಮಿತಿ ಇದೆ. ಅಷೂರೆನ್ಸ್ ಕಮಿಟಿ ಇದೆ. ಅಷೊರೆನ್ಸ್ ಕಮಿಟಿಯವರು ಇದನ್ನು ನೋಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಈಗ ಒಂದು ಅಷೂರೆನ್ಸ್ ಕಮಿಟಿ ಇದೆ, ಇನ್ನೊಂದು ಅಷೂರೆನ್ಸ್ ಕಮಿಟಿ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ ದೇವೇಗೌಡ.— ಸದನದಲ್ಲಿ ಮಾನ್ಯ ಮಂತ್ರಿಗಳು ಅಷೂರೆನ್ಸ್ ಕೊಟ್ಟು, ಆ ಕೆಲಸ ಆಗದೇಹೋದರೆ ಅವರ ಮೇಲೆ ಕಂಟೆಮ್ಪ್ಟ್ ಮೂವ್ ಮಾಡುವುದಕ್ಕೆ ಸಾಧ್ಯತೆ ಇದೆ.

ಆದರೆ ನಾನು ಇಷ್ಟನ್ನು ಹೇಳುತ್ತೇನೆ. ನಾನು ಏನು ಯೋಜನೆಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ, ಅವಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಹಿಂದೆ ಬಿದ್ದಿಲ್ಲ ನಾನು ಯಾವುದೇ ಉತ್ತರವನ್ನು ಕೊಡುವಾಗ, ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇದ್ದರೆ ಮಾತ್ರ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಆರಂಭ ಶೂರತ್ವ ಮಾಡಿದ್ದೀರಿ

ಶ್ರೀ ಹೆಚ್. ಡಿ. ದೇವೇಗೌಡ.— ಹಾಗೇನಿಲ್ಲ, ಯಾವುದಾದರೂ ಕೆಲಸ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರೆ, ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಆರಂಭ ಶೂರತ್ವ ಮಾಡಿದ್ದೀರಿ

SRI. H. D. DEVEGOWDA.— You are a senior leader you cannot talk like this.

SRI. B. BASAVALINGAPPA.— Whether senior or junior....

SRI. H. D. DEVEGOWDA — He is a responsible leader. ನಾನು ತಪ್ಪನ್ನು ಬರೀ ಟೀಜ್ಞೇಟರ್ ಎಂದು ಕರೆಯುತ್ತಿಲ್ಲ. ತಾವು ಒಬ್ಬ ರೆಸ್ಪಾನ್ಸಿಬಲ್ ಲೀಡರ್ ಆಫ್ ದಿಸ್ ಹೌಸ್. ಈ ಸಭೆಯಲ್ಲಿ ನಾನು ಯಾವುದಾದರೂ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದುದನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರೆ then I will express my apology to this House

ಬೆಳಗಾವಿ ಜಿಲ್ಲೆಯ ನೀರಾವರಿ ಯೋಜನೆಗಳು

೧೦೯. ಪ್ರೊ. ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಶಿರೂರು (ರಂಗದ ಹೊಳೆ) ಆಣೆಕಟ್ಟಿನ ನಿರ್ಮಾಣದ ಕಾರ್ಯ ಯಾವ ಹಂತದಲ್ಲಿದೆ ?

ಆ) ನೀರು ನಷ್ಟ ಅಂದಾಜು ಪತ್ರಿಕೆ ಹಾಗೂ ಸರಕಾರದ ಮಂಜೂರಾತಿ ಇವುಗಳನ್ನು ಪೂರ್ಣಗೊಳಿಸಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಇ) ಯೋಜನೆಯಲ್ಲಿ ಮುಳುಗಡೆಯಾಗಬಹುದಾದ ಭೂಮಿಯ ವಿಸ್ತೀರ್ಣವೆಷ್ಟು ?

ಈ) ನೀರು ನಿಲ್ಲುವ ಪ್ರಮಾಣ ಹಾಗೂ ನೀರಿನ ಕೆಳಗೆ ಬರುವ (ಬೆಳೆಗಾಗಿ) ಒಟ್ಟಾರೆ ಕ್ಷೇತ್ರ ಎಷ್ಟು ?

ಉ) ಹಿಪ್ಪರಗಿ ಆಣೆಕಟ್ಟಿನ ಕೆಲಸ ಯಾವ ಹಂತದಲ್ಲಿದೆ ಹಾಗೂ ಕೆಲಸವನ್ನು ಪ್ರಾರಂಭಿಸಲು ತಡವಾಗುತ್ತಿರುವುದಕ್ಕೆ ಕಾರಣವೇನು ?

ಊ) ಹಿಪ್ಪರಗಿ ಆಣೆಕಟ್ಟಿಗಾಗಿ ರಾಜ್ಯ ಸರಕಾರದಿಂದ ತಗಲುವ ಖರ್ಚು ಎಷ್ಟು ಹಾಗೂ ಕೇಂದ್ರ ಸರ್ಕಾರದಿಂದ ತಗಲುವ ಖರ್ಚು ಎಷ್ಟು ?

ಶ್ರೀ. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಶಿರೂರು (ರಂಗದಹೊಳೆ) ಆಣೆಕಟ್ಟು ಎನ್ನುವ ಹೆಸರಿನ ಯಾವ ಯೋಜನೆಯು ಅನ್ವೇಷಣೆಯಲ್ಲಿ ಇರುವುದಿಲ್ಲ. ಆದರೆ ಶಿರೂರು ಹತ್ತಿರ ಮಾರ್ಕಂಡೆಯ ನದಿಗೆ ಜಲಾಶಯ ನಿರ್ಮಾಣದ ಯೋಜನೆ ಅನ್ವೇಷಣೆ ಅಂತಿಮ ಘಟ್ಟದಲ್ಲಿದೆ,

ಆ) ಅನ್ವೇಷಣಾ ಕಾರ್ಯವು ಪೂರೈಸಿ ಅಂದಾಜು ಪಟ್ಟಿ ತಯಾರಾದ ಮೇಲೆ ಆದರ ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆಗಳನ್ನು ವಿಮರ್ಶಿಸಿದ ನಂತರ ಕೆಲಸವನ್ನು ಕೈಗೊಳ್ಳಲು ಯೋಜಿಸಲಾಗುವುದು.

ಇ) ಸುಮಾರು ೯೨೦ ಹೆಕ್ಟೇರುಗಳು (೨೨೭೫ ಎಕರೆಗಳು)

ಈ) ನೀರು ನಿಲ್ಲುವ ಪ್ರಮಾಣ ೧೧೬.೫೨ ದಶಲಕ್ಷ ಘನ ಮೀಟರುಗಳು (೪೧೧೪.೮೧ ದಶಲಕ್ಷ ಘನ ಅಡಿಗಳು) ನೀರಾವರಿ ಕ್ಷೇತ್ರ ೩೨, ೩೭೫ ಹೆಕ್ಟೇರುಗಳು (೮೧,೦೦೦ ಎಕರೆಗಳು)

ಉ) ಹಿಪ್ಪರಗಿ ಆಣೆಕಟ್ಟಿನ ಎಡ ಹಾಗೂ ಬಲ ಬದಿಯ ೫೧೧೫ ಮಿ. ಉದ್ದದ ಒಡ್ಡಿನ ಕಾಮಗಾರಿ ಮುಗಿಯುವ ಹಂತದಲ್ಲಿದ್ದು ಕೋಡಿ (ಸ್ಪಿಲ್‌ವೇ)ಯ ತಳಪಾಯದ ಕಾಂಕ್ರೀಟನ್ನು ಹಾಕಲಾಗಿದೆ. ೧೯೮೬–೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಒಟ್ಟು ೫೦ ಲಕ್ಷ ರೂ.ಗಳು ಅನುದಾನವನ್ನು ಒದಗಿಸಿದ್ದು ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಊ) ಹಿಪ್ಪರಗಿ ಆಣೆಕಟ್ಟಿನ ಯೋಜನೆಯ ಅಂದಾಜು ೧೯೮೫–೮೬ರ ದರ ಪಟ್ಟಿಯ ಮೇರೆಗೆ ೧೫೬.೭೯ ಕೋಟಿ ರೂ.ಗಳು. ಪಿನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಟ್ಟಿದೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್.— ಸನ್ಮಾನ್ಯ ಅಧ್ಯಕ್ಷರೇ, ಇವೆರಡೂ ಯೋಜನೆಗಳೂ ಕೃಷ್ಣಾ ಬೇಸಿನ್‌ನಲ್ಲಿ ಬರುತ್ತವೆ. ಇವೊತ್ತು ತಮ್ಮ ಮೂಲಕ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ, ತೆಲುಗು-ಗಂಗಾ ಬಗ್ಗೆ ಚರ್ಚೆ ಮಾಡುವುದು ನಡೆದಿದೆ. ಈ ಕೃಷ್ಣಾ ಬೇಸಿನ್‌ನಲ್ಲಿ ಬರುವ ಎಲ್ಲಾ ಯೋಜನೆಗಳನ್ನೂ ನಾವು ಪೂರ್ತಿ ಮಾಡದೇ ಹೋದರೆ, ನಮ್ಮ ರಾಜ್ಯದ ಪಾಲಿನ ನೀರು ಏನಿದೆ ಅದನ್ನು ಪೂರ್ತಿಯಾಗಿ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಶಿರೂರು ಆಣೆಕಟ್ಟನ್ನು ಕಟ್ಟಬೇಕಾಗಿದೆ. ಶಿರೂರು ಆಣೆಕಟ್ಟನ್ನು ಕಟ್ಟಿ, ಅದಕ್ಕೆ ಹಿಪ್ಪರ್ಗಿ ಜಲಾಶಯದಿಂದ ನೀರನ್ನು ಬಿಡುವ ಯೋಜನೆ ಇದೆ. ಇದರಿಂದ ಅಲ್ಲಿರುವ ವಿದ್ಯುತ್ ಘಟಕಕ್ಕೂ ಉಪಯೋಗ ಆಗುತ್ತದೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇದನ್ನು ಮಾಡದೇ ಹೋದರೆ ಅಲ್ಲಿ ವಿದ್ಯುತ್ ಘಟಕ ಸ್ಥಾಪನೆ ಮಾಡುವುದು ಲೇಟಾಗುತ್ತದೆ. ಇದು ಲೇಟಾದರೆ, ಈ ಕೆಲಸವೂ ಆಗುವುದಿಲ್ಲ, ಆ ಕೆಲಸವೂ ಆಗುವುದಿಲ್ಲ. ಆದಕಾರಣ ಈ ಯೋಜನೆಗೆ ನೀರು ಪೂರೈಕೆ ಮಾಡುವ ಕಾರ್ಯಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ಈ ಯೋಜನೆಗಾಗಿ ಒಟ್ಟು ಖರ್ಚು ಎಷ್ಟು ಬರುತ್ತದೆ ಎಂದು ಕೇಳಿದ್ದೇನೆ, ಅದನ್ನು ತಾವು ಹೇಳಿರುವುದಿಲ್ಲ. ಹಿಪ್ಪರಗಿ ಆಣೆಕಟ್ಟಿನ ಯೋಜನೆಗೆ ಕೇಂದ್ರ ಸರಕಾರದಿಂದ ಎಷ್ಟು ಹಣ ಬಂದಿದೆ, ರಾಜ್ಯ ಸರಕಾರ ಎಷ್ಟು ಹಣ ಖರ್ಚು ಮಾಡಿದೆ ಎಂಬುದರ ಬಗ್ಗೆಯೂ ಸಹ ತಾವು ಹೇಳಲಿಲ್ಲ. ಹಿಪ್ಪರಗಿ ಆಣೆಕಟ್ಟಿನ ಯೋಜನೆಗೆ ಈ ಸಾಲಿನ ಆಯವ್ಯಯದಲ್ಲಿ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ೧೫೦ ಕೋಟಿ ರೂಪಾಯಿಗಳ ಈ ಯೋಜನೆಗೆ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಇದನ್ನು ಇರುವೆ ಕಾಲಿನಿಂದ ಮಾಡುತ್ತೀರೋ, ಆನೆ ಕಾಲಿನಿಂದ ಮಾಡುತ್ತೀರೋ, ಈ ರೀತಿ ಈ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ? ಈ ಎರಡೂ ಯೋಜನೆಗಳನ್ನು ಎಷ್ಟು ವರ್ಷಗಳಲ್ಲಿ ತಾವು ಮುಗಿಸುತ್ತೀರಿ, ಮುಗಿಸುವುದಕ್ಕೆ ಕಾರ್ಯಕ್ರಮ ಏನು

ಮಾಡಿಕೊಂಡಿದ್ದೀರಿ ? ನಿಮ್ಮ ಸರಕಾರವೇ ಇರಬಹುದು, ಅಥವಾ ನಮ್ಮ ಸರಕಾರವೇ ಇರಬಹುದು ಕೇಂದ್ರ ಸರಕಾರದಿಂದ ಹಣ ಕೊಡಬಹುದು, ಇದಕ್ಕೆ ತಾವು ಎಷ್ಟು ಹಣ ಕೊಡುತ್ತೀರಿ ? ಇದಕ್ಕೆ ವಿಶೇಷ ಪ್ರಯತ್ನ ಮಾಡಬೇಕಾಗುತ್ತದೆ. ಕೃಷ್ಣಾ ಬೇಸಿನ್ ಯೋಜನೆಗಳಿಗೆ ಹಣದ ವ್ಯವಸ್ಥೆ ಮಾಡಿ ಕೊಂಡು ಯಾವಾಗ ಇವುಗಳನ್ನು ಮುಗಿಸುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾರ್ಕಂಡೇಯ ಯೋಜನೆಗೆ ಇನ್ನೂ ಎಸ್ಟಿಮೇಟ್ ಮಾಡಿಲ್ಲ, ಇನ್ನು ಅದನ್ನು ಮುಗಿಸುವ ಪ್ರಶ್ನೆ ಆಮೇಲೆ. ಹಿಪ್ಪರಗಿ ಯೋಜನೆ ಬಗ್ಗೆ ಹೇಳುವುದಾದರೆ, ಒಂದು ಕಾಲದಲ್ಲಿ ಬರಗಾಲ ಕಾಮಗಾರಿ ಎಂದು ಅದನ್ನು ತೆಗೆದುಕೊಂಡರು. ಆಮೇಲೆ ಅದು ನಿಂತು ಹೋಯಿತು. ಮಾನ್ಯ ಕೆ. ಹೆಚ್. ಪಾಟೀಲರಿಗೂ ಗೊತ್ತಿದೆ. ಅದು ನಿಂತು ಹದಿನಾಲ್ಕು ಹದಿನೈದು ವರ್ಷ ಆಯಿತು. ಇನ್ನೂ ನಿಂತಿದೆ ನಾವೂ ಏನೂ ಮಾಡಿಲ್ಲ. ಆದರೆ ಸರಕಾರ ಈಗ ಇದನ್ನು ಪುನಃ ಕೈಗೆತ್ತಿಕೊಂಡು ಪ್ರಯತ್ನ ಮಾಡುತ್ತಿದೆ. ಕೇಂದ್ರ ಸರಕಾರದಲ್ಲಿರತಕ್ಕಂಥ ನೀರಾವರಿ ಮಂತ್ರಿಗಳೂ ಸಹ ಇದರ ಬಗ್ಗೆ ತುಂಬಾ ಆಸಕ್ತಿ ಇಟ್ಟುಕೊಂಡಿದ್ದಾರೆ. ತುಂಬಾ ಆಸಕ್ತಿ ಇದರ ಬಗ್ಗೆ ಅವರಿಗೆ ಇದೆ. ಅವರೂ ಸಹ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ ನಾವೂ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಕಡೆಯಿಂದ ಇವತ್ತಿನ ದರದ ಮೇರೆಗೆ ಆಗತಕ್ಕಂಥ ೧೫೮ ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರು ಮಾಡಿ, ಕೇಂದ್ರ ಸರಕಾರದ ಪರವಾನಗಿಗಾಗಿ ಅದನ್ನು ಕಳುಹಿಸಿಕೊಟ್ಟಿದ್ದೇವೆ. ಅವರು ಕ್ಲಿಯರೆನ್ಸ್ ಕೊಡಬೇಕು. ಇದು ಒಂದು ಪ್ರಶ್ನೆ. ಇದಕ್ಕೆ ನಮ್ಮ ಬಜೆಟ್‌ನಲ್ಲಿ ೫೦ ಲಕ್ಷ ರೂಪಾಯಿಂಗಳನ್ನು ಇಟ್ಟುಕೊಂಡಿದ್ದೇವೆ, ಇನ್ನೂ ಆದಕ್ಕಿಂತ ಮುಂದೆ ಹೋಗ ಬೇಕೆಂಬುದೂ ನಮ್ಮ ಆಶಯ, ಆದರೆ ಸಂಪನ್ಮೂಲಗಳ ಶಕ್ತಿ ನೋಡಿಕೊಂಡು ಮುಂದೆ ಹೋಗ ಬೇಕಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್,—ಶೀರೂರ್ ಯೋಜನೆ ಬಗ್ಗೆ ನೀಲಿನಕ್ಷೆ ಮಾಡುತ್ತಿದ್ದೇವೆ, ಅಂದಾಜು ಪಟ್ಟಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇದಕ್ಕಿಂತ ಮೊದಲೇ ಇದು ಎಷ್ಟು ಸಲ ಆಗಿದೆ. ಈ ಪ್ರಶ್ನೆ ಎಷ್ಟೋ ಸಲ ಈ ಸದನದಲ್ಲೂ ಕೂಡ ಪ್ರಸ್ತಾಪ ಆಗಿದೆ. ೧೯೭೮ರ ಚುನಾವಣೆಯ ನಂತರವೂ ಆಗಿದೆ. ಮೊದಲು ಕೂಡ ಆಗಿದೆ, ಆಮೇಲೂ ಕೂಡಾ ಆಗಿದೆ. ಅದೇನೂ ಹೊಸ ಯೋಜನೆ ಆಲ್ಲ, ಹಳೆಯ ಯೋಜನೆಯೇ. ಇದಕ್ಕೆ ತಮ್ಮಿಂದ ನೇರವಾದ ಉತ್ತರ ಬೇಕು. ಈ ಕಾರ್ಯಕ್ರಮ ತೆಗೆದುಕೊಂಡು ಆಲ್ಲಿನ ವಿದ್ಯುತ್ ಘಟಕಕ್ಕೆ ನೀರು ಕೊಡಬೇಕು. ವಿದ್ಯುತ್ ಘಟಕ ಪ್ರಾರಂಭವಾಗುತ್ತಿದೆ. ಅದಕ್ಕೆ ನೀರು ಕಡಿಮೆಯಾಗಿದೆ. ಆದಕಾರಣ ಇದನ್ನು ಬೇಗ ಮುಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಹಿಪ್ಪರಗಿ ಅಣೆಕಟ್ಟಿನ ಬಗ್ಗೆ ರಾಜ್ಯ ಸರಕಾರದವರು, ಕೇಂದ್ರ ಸರಕಾರದವರೂ ಕೂಡಿ ಪ್ರಯತ್ನ ಮಾಡುತ್ತಿದ್ದೇವೆ ಎಂದು ಶ್ರೀಮತಿ ಲೀಲಾದೇವಿ ಪ್ರಸಾದ್ ಅವರು ಹೇಳಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇವೆ. ಪತ್ರಿಕೆಯನ್ನು ಜನಗಳೂ ಓದುತ್ತಾರೆ. ಅವರು ಇದರ ಬಗ್ಗೆ ಕೇಳಿದರೆ ನಾವು ಏನು ಹೇಳಬೇಕು. ಈ ಸದನದಲ್ಲಿ ತಾವು ಏನಾದರೂ ಭರವಸೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ ಮುಗಿಸುತ್ತೇವೆ ಎಂದು ಹೇಳದೆ ಹೋದರೆ ಸರಿ ಆಗುವುದಿಲ್ಲ, ಯಾವುದೇ ಕಾರ್ಯಕ್ರಮ ತಾವು ತೆಗೆದುಕೊಂಡರೂ ಅದಕ್ಕೆ ನಮ್ಮ ಪಕ್ಷದವರೂ ಸಹಕಾರ ಕೊಡುತ್ತಾರೆ ಎಂದು ಹೇಳುತ್ತೇನೆ. ಆದಷ್ಟು ಬೇಗ ತಾವು ಈ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಒತ್ತಾಯ ಮಾಡಿದುದರಿಂದಲೇ ಈಗ ೧೫೮ ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ತಯಾರು ಮಾಡಲಾಗಿದೆ. ಇಲ್ಲದೇ ಹೋದರೆ, ಅದು ಹಾಗೆಯೇ ನಿದ್ದೆ ಮಾಡುತ್ತಿತ್ತು, ಕಳೆದ ೧೫ ವರ್ಷಗಳಿಂದ ನಿದ್ದೆ ಮಾಡುತ್ತಿತ್ತು, ಈಗಲೂ ಹಾಗೆಯೇ ನಿದ್ದೆ ಮಾಡುತ್ತಿತ್ತು. ಅವರು ಒತ್ತಾಯ ಮಾಡಿದುದರಿಂದಲೇ ೧೫೮ ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ತಯಾರು ಮಾಡಿ ಅದು ಕೇಂದ್ರ ಸರಕಾರಕ್ಕೆ ಹೋಗಿದೆ. ಕೇಂದ್ರ ಸರಕಾರದ ಬಳಿಗೆ ಹೋಗಿ ಹಣ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಒಂದು ವೇಳೆ ಲೀಲಾದೇವಿ ಪ್ರಸಾದ್ ಅವರು ಮಾಡದೇ ಮಲ್ಲಾರಿಗೌಡ ಪಾಟೀಲರು ಮಾಡಿದ್ದರೆ ಅದನ್ನು ಕಸದ ಬುಟ್ಟಿಗೆ ಹಾಕುತ್ತಿದ್ದರಾ?

ಶ್ರೀ ಹೆಚ್. ಡಿ. ದೇವೇಗೌಡ.—ಸಂಪನ್ಮೂಲಗಳನ್ನು ಕೂಡಿಸಿಕೊಂಡು ಮಾಡೋಣ ಎಂದು ಹೇಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಹಿಪ್ಪರಗಿ ಆಣೆಕಟ್ಟಿನ ಎಡ ಹಾಗೂ ಬಲ ತುದಿಯಲ್ಲಿ ೫೧೫ ಕಿಲೋಮೀಟರ್ ಮಣ್ಣಿನ ಒಡ್ಡಿನ ಕಾಮಗಾರಿ ಮುಗಿದಿದೆ ಎಂದಾಗ ಇದು ಕೇವಲ ೫೦ ಲಕ್ಷ ರೂಪಾಯಿಗಳ ಹಣದಲ್ಲಿ ಮುಗಿದಿರಲಿಕ್ಕಿಲ್ಲ ಎಂದು ನನ್ನ ಅಭಿಪ್ರಾಯ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು. ಸ್ಪಿಲ್‌ವೇ ತಳಪಾಯದ ಕಾನ್‌ಕ್ರೀಟ್‌ನ್ನು ಯಾವ ವರ್ಷದಲ್ಲಿ ಹಾಕಲಾಯಿತು? ಈ ವರ್ಷ ಒದಗಿಸಿದ ೫೦ ಲಕ್ಷ ರೂಪಾಯಿಗಳಲ್ಲಿ, ಕಳೆದ ಐದು ತಿಂಗಳಲ್ಲಿ ಈ ರಿಸರ್ವಾಯರ್ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಮೂರು ಕಾಂಪೊನೆಂಟ್ಸ್ ಇದೆ. ಎರಡು ಲಿಫ್ಟ್ ಇರಿಗೇಷನ್, ಒಂದು ರಿಸರ್ವಾಯರ್. ಡ್ಯಾಮ್ ಕಟ್ಟತಕ್ಕದ್ದು ಬೇರೆ. ಆದರೆ ಅದಕ್ಕೆ ಮೊದಲು ಫೌಂಡೇಷನ್ ಮುಗಿಸಿಕೊಳ್ಳಬೇಕು. ಇದಕ್ಕೆ ಕಾರಣ ಇಷ್ಟೇ, ಆಲಮಟ್ಟಿ ಆಣೆಕಟ್ಟು ೧೭೨೦ ಅಡಿಗೆ ಹೋದಾಗ, ಇಲ್ಲಿ ನೀರು ತುಂಬಿಕೊಳ್ಳುತ್ತದೆ ಆಮೇಲೆ ಫೌಂಡೇಷನ್ ಮಾಡಲು ಆಗುವುದಿಲ್ಲ. ಹತ್ತು ವರ್ಷದಿಂದ ಆ ಕೆಲಸ ಆಗುತ್ತಿತ್ತು. ಫೌಂಡೇಷನ್ ಗ್ರೌಂಡ್‌ವೆಲ್‌ಗೆ ಬಂತು. ಅಷ್ಟಕ್ಕೇ ನಿಂತು ಹೋಯಿತು. ಅಲ್ಲಿ ಖರ್ಚು ಮಾಡಿರುವ ಹಣ ನಾಲ್ಕು ಕೋಟಿ ರೂಪಾಯಿಗಳು. ಈ ಸಾರಿ ನಿಮ್ಮ ಒತ್ತಾಯದ ಮೇಲೆ ೫೦ ಲಕ್ಷ ರೂಪಾಯಿಗಳ ದುಂಡು ಇಟ್ಟಿದ್ದೇವೆ. ಕೇಂದ್ರ ಸರಕಾರದ ಮಂತ್ರಿಗಳು ಇದರ ಬಗ್ಗೆ ಆಸಕ್ತಿ ಇಟ್ಟುಕೊಂಡಿದ್ದಾರೆ. ಇದಕ್ಕೆ ಹೇಗಾದರೂ ಹಣ ಕೊಡಿಸಿಕೊಳ್ಳಬೇಕೆಂದು ಸರಕಾರದ ಇರಾದೆ ಇದೆ, ಪ್ರಯತ್ನ ಮಾಡೋಣ.

ಬೆಳೆ ವಿಮೆ ಯೋಜನೆ

೬೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫–೮೬ನೇ ವರ್ಷದಲ್ಲಿ ಕಡ್ಡಾಯ ಬೆಳೆ ವಿಮೆ ಯೋಜನೆ ಜಾರಿಗೆ ಬಂದಿದ್ದು ಅದರಿಂದಾಗಿ ೧) ಸಹಕಾರಿ ಸಂಸ್ಥೆಗಳ ಮೂಲಕ ೨) ಗ್ರಾಮೀಣ ಬ್ಯಾಂಕುಗಳ ಮೂಲಕ ೩) ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಎಷ್ಟೆಷ್ಟು ರೈತರು ಎಷ್ಟೆಷ್ಟು ಎಕರೆ ಭೂಮಿಗೆ ವಿಮೆ ಮಾಡಿಸಿದ್ದಾರೆ?

(ಜಿಲ್ಲಾವಾರು ವಿವರ ಒದಗಿಸಬೇಕಾಗಿ ಕೋರಿಕೆ),

ಆ) ಬೆಳೆ ವಿಮೆ ಯೋಜನೆಗಳಿಂಳಗಾದವರಲ್ಲಿ ಪರಿಹಾರಕ್ಕಾಗಿ ಅರ್ಜಿ ಬಂದಿದೆಯೆಂ ? ಹಾಗಿದ್ದಲ್ಲಿ ಮಂಜೂರಾದ ಪರಿಹಾರ ಎಷ್ಟು ಹಾಗೂ ಯಾವ ಜಿಲ್ಲೆಗಳಲ್ಲಿ ಪರಿಹಾರ ಸಿಕ್ಕಿದೆ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು),—

ಅ) ೧೯೮೫–೮೬ ರಿಂದ ರಾಜ್ಯದಲ್ಲಿ ಸಮಗ್ರ ಬೆಳೆ ವಿಮಾ ಯೋಜನೆಗೆ ಜಾರಿಗೆ ಬಂದಿದ್ದು ಈ ಯೋಜನೆಯಡಿಯಲ್ಲಿ ೮೫–೮೬ರ ಮುಂಗಾರು ಹಿಂಗಾರು ಮತ್ತು ಬೇಸಿಗೆಯಲ್ಲಿ ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ವಿಮೆ ಯೋಜನೆಗೆ ಒಳಪಟ್ಟ ರೈತರ ಸಂಖ್ಯೆ ಹಾಗೂ ಕ್ಷೇತ್ರಗಳ ವಿಸ್ತೀರ್ಣಗಳ ವಿವರ ಈ ಕೆಳಕಂಡಂತಿದೆ.